ಶ್ರೀ ಪಿ.ಕೃಷ್ಣಪ್ಪ(ದೊಡ್ಡಬಳ್ಳಾಪುರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ಸ್ವೀಕರಿಸಲಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು? ಇವುಗಳಲ್ಲಿ ವಿದ್ಯುತ್ ಸಂಪರ್ಕ ನೀಡಿರುವ ಸಂಖ್ಯೆ ಎಷ್ಟು? ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು?

ಆ. ಈ ತಾಲ್ಲೂಕಿನಲ್ಲಿರುವ ನೀರಾವರಿ ಪಂಪು ಸೆಟ್ಟುಗಳ ಸಂಖ್ಯೆ ಎಷ್ಟು? ಈ ಪಂಪು ಸೆಟ್ಟುಗಳಿಗೆ ಅಗತ್ಯವಿರುವ ವಿದ್ಯುತ್ ಪ್ರಮಾಣವೆಷ್ಟು?

ಶ್ರೀ ವೀರಕುಮಾರ್ ಅ.ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕಳೆದ 2 ವರ್ಷಗಳಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಸ್ವೀಕರಿಸಲಾಗಿರುವ ಒಟ್ಟು ಅರ್ಜಿಗಳ ಸಂಖ್ಯೆ 666. ಇವುಗಳಲ್ಲಿ ವಿದ್ಯುತ್ ಸಂಪರ್ಕ ನೀಡಿರುವ ಅರ್ಜಿಗಳ ಸಂಖ್ಯೆ : 577. ಬಾಕಿ ಇರುವ ಅರ್ಜಿಗಳ ಸಂಖ್ಯೆ 89.

ಆ. ಈ ತಾಲ್ಲೂಕಿನಲ್ಲಿ ದಿನಾಂಕ: 30-6-2001ರ ಅಂತ್ಯಕ್ಕೆ ಇರುವ ನೀರಾವರಿ ಪಂಪು ಸೆಟ್ಟುಗಳ ಒಟ್ಟು ಸಂಖ್ಯೆ : 9,613 ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕಳೆದ ವರ್ಷದಲ್ಲಿ (2000-01) ನೀರಾವರಿ ಪಂಪು ಸೆಟ್ಟುಗಳಿಂದ ಬಳಸಲಾದ ವಿದ್ಯುತ್ತಿನ ಪ್ರಮಾಣ 53.72 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದೆ.

ತುರುವೇಕರೆ ತಾಲ್ಲೂಕನ್ನು ಕಪ್ಪು ಪ್ರದೇಶದಿಂದ ಕೈಬಿಡುವುದು.

3065(3461)

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ)(ತುರುವೇಕರೆ): ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ತುರುವೇಕರೆ ತಾಲ್ಲೂಕನ್ನು 'ಕಪ್ಪು' ಪ್ರದೇಶದಿಂದ ಕೈ ಬಿಡುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಆ) ಸುಮಾರು 6 ವರ್ಷಗಳಿಂದ ರೈತರು ಪಂಪ್‌ಸೆಟ್ ಹಾಕಿಸಿಕೊಳ್ಳಲು ಹಾಗೂ

ಕೆ.ಪಿ.ಟಿ.ಸಿ.ಎಲ್.ನಿಂದ ವಿದ್ಯುತ್ ಸಂಪರ್ಕ ತಗದುಕೊಳ್ಳಲು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈಗಾಗಲೇ ಈ ತಾಲ್ಲೂಕಿಗೆ ಹೇಮಾವತಿ ನೀರು ಹರಿದು 90 ಭಾಗ ನೀರಾವರಿ ಆಗುತ್ತಿದ್ದು ಅಂತರ್ಜಲ ಹೆಚ್ಚಿರುವುದರಿಂದ ಈ ಕ್ರಮ ಕೈಬಿಡಲಾಗುವುದೇ? ಹಾಗಿದ್ದಲ್ಲಿ ಎಂದಿನಿಂದ ಜಾರಿಗೆ ಕೊಡಲಾಗುವುದು?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು):

ಅ) ಅಂತರ್ಜಲ ಮೌಲೀಕರಣ ಸಮಿತಿ 1997ರ ಮಾರ್ಗಸೂಚಿಯನ್ವಯ 31-12-1999ರ ಅಂತ್ಯಕ್ಕೆ ರಾಜ್ಯದ ಅಂತರ್ಜಲ ಸ್ಥಿತಿಗತಿಯನ್ನು ಜಲಾನಯನವಾರು ಅನ್ವಯವಾಗುವಂತೆ ಮೌಲೀಕರಣ ಮಾಡಿ ವರದಿ ತಯಾರಿಸಿದ್ದು ಅದು ಇನ್ನೂ ಪ್ರಕಟಣೆಗೊಂಡಿಲ್ಲ. ಅದು ಪ್ರಕಟಣೆಗೊಂಡ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಆ) ಬಂದಿದೆ.

ಇ) ಅಂತರ್ಜಲ ಪುನರ್‌ಭರಣವನ್ನು ಲೆಕ್ಕೀಕರಿಸುವಾಗ ಕೆರೆ, ಕಾಲುವೆ ಹಾಗೂ ಇತರೆ ಮೂಲಗಳಿಂದ ಅಂತರ್ಜಲ ವೃದ್ಧಿಯಾಗುವುದನ್ನು ಗಣನೆಗೆ ತಗದುಕೊಂಡು ಮೌಲೀಕರಣ ಮಾಡಲಾಗಿದೆ. ವರದಿಯು ಪರಿಶೀಲನೆಯಲ್ಲಿದ್ದು ತುರುವೇಕೆರೆ ತಾಲ್ಲೂಕಿನ ಅಂತಿಮ ಅಂತರ್ಜಲ ಸ್ಥಾನಮಾನವನ್ನು ವರದಿಯು ಪ್ರಕಟಗೊಂಡ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಲೋಕಾಯುಕ್ತ ಧಾಳಿ.

3066(3784)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ(ಅಣ್ಣಯ್ಯ)(ತುರುವೇಕೆರೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ಕೆಲವು ತಿಂಗಳಿಂದ ಲೋಕಾಯುಕ್ತದ ದಾಳಿ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ಕಡಿಮೆಯಾಗಲು ಕಾರಣವೇನು?